



## ಅಜಗಜಾಂತರಕ್ಕೆ ಈ ಚಿತ್ರ ಅನ್ವರ್ಥ

ಗೆಳತಿಯ ವಿವಾಹಕ್ಕೆಂದು ಈಚೆಗೆ ದಾವಣಗೆರೆಗೆ ಹೋಗಿದ್ದೆ. ಹಾಗೆಯೇ ವಾಪಸ್ ಬರುವಾಗ, 'ಕರ್ನಾಟಕದ ಖಜುರಾಹೊ ಖ್ಯಾತಿ ಪಡೆದ ಹರಪನಹಳ್ಳಿ ತಾಲ್ಲೂಕಿನ ಬಾಗಳಿ ಗ್ರಾಮದ ಶ್ರೀಕಲ್ಲೇಶ್ವರ ದೇಗುಲ' ಎಂಬ ಮಾಹಿತಿಯ ಲೇಖನವನ್ನು ಪ್ರಜಾವಾಣಿ ಪತ್ರಿಕೆಯಲ್ಲಿ ಓದಿದ್ದ ನೆನಪಾಯ್ತು. ಅಂತೆಯೇ ಕಾರು ಶ್ರೀಕಲ್ಲೇಶ್ವರ ದೇಗುಲದತ್ತ ಹೊರಡಿತು.

ಅಲ್ಲಿಗೆ ಹೋದ ಮೇಲಂತೂ ನನಗೆ ಆಶ್ಚರ್ಯವಾಯಿತು. ಅಲ್ಲಿನ ವಾಸ್ತುಶಿಲ್ಪವು ನನ್ನ ಕಣ್ಮನ ಸೆಳೆಯಿತು. ಕಲ್ಲೇಶ್ವರ ದೇಗುಲದ ಶಿಲ್ಪಕಲೆ ಹಳೇಬೀಡು, ಬೇಲೂರು ಪ್ರವಾಸಿತಾಣಗಳಿಗಿಂತ ಕಡಿಮೆ ಇಲ್ಲ ಎಂದೆನಿಸಿತು. ಖಜುರಾಹೊ ಖ್ಯಾತಿಯ ಮಿಥುನ ಶಿಲ್ಪಗಳು ಇಲ್ಲಿನ ದೇವಾಲಯದ ಹೊರಭಾಗದಲ್ಲಿ ಭಿತ್ತಿ ಚಿತ್ರಗಳಾಗಿ ಕಾಣುತ್ತವೆ. ಈ ಪೈಕಿ ಏಕಶಿಲೆಯಲ್ಲಿ ಕೆತ್ತನೆಗೊಂಡ 'ಅಜಗಜಾಂತರ' ಶಿಲ್ಪ ಕಲಾಕೃತಿ ನನ್ನನ್ನು ಸೆಳೆಯಿತು. ಆ ಕೆತ್ತನೆಯು ಸಾಮಾನ್ಯ ಎಂದೆನಿಸಿದರೂ ಅದರ ವಿಶೇಷತೆಯನ್ನು ಅರ್ಚಕರಾದ ಬಸವರಾಜ ಅವರ ಮಾತಿನಲ್ಲಿ ಕೇಳಿ ಆಶ್ಚರ್ಯಗೊಂಡೆ. 'ಕನ್ನಡ ಭಾಷೆಯ ಗುಣಪದವಾಗಿ ಬಳಸುವ 'ಅಜಗಜಾಂತರ' ಪದ ಹೋಲಿಕೆಗೆ ನಿಲುಕದ, ಆಡುಆನೆಯ ನಡುವಿರುವಷ್ಟು ಅಂತರವನ್ನು, ವ್ಯತ್ಯಾಸವನ್ನು ಸೂಚಿಸುತ್ತದೆ. ಒಂದಕ್ಕೊಂದು ಸಾಮಂಜಸ್ಯ ಇಲ್ಲದಿರುವಿಕೆಯನ್ನು ನಾವು ಅಜಗಜಾಂತರ ಪದದಿಂದ ಉಲ್ಲೇಖಿಸುತ್ತೇವೆ.

–ಪ್ರಿಯಾಂಕಾ, ಬೆಂಗಳೂರು

## ಸಂಚಾರಿ ಬೆಲ್ಲ ತಯಾರಿಕಾ ಘಟಕ

ಈಚೆಗೆ ಮಂಡ್ಯ ಸಮೀಪದಲ್ಲಿರುವ ಕೃಷಿ ಸಂಶೋಧನಾ ಕೇಂದ್ರ ವಿ.ಸಿ. ಫಾರಂ ಆವರಣದಲ್ಲಿ ನಡೆದ ಕೃಷಿ ಯಂತ್ರೋಪಕರಣಗಳ ಪ್ರದರ್ಶನಕ್ಕೆ ಹೋಗಿದ್ದೆ. ಅದರಲ್ಲಿ ಕಬ್ಬು ನಾಟಿ ಮಾಡುವ ಯಂತ್ರಗಳು ಸೇರಿದಂತೆ ವಿವಿಧ ರೀತಿಯ ಕೃಷಿ ಯಂತ್ರೋಪಕರಣಗಳು ಪ್ರದರ್ಶನಕ್ಕೆ ಇಡಲಾಗಿತ್ತು. ಆ ಪೈಕಿ ನನ್ನ ಗಮನ ಸೆಳೆದಿದ್ದು 'ಸಂಚಾರಿ ಬೆಲ್ಲ ತಯಾರಿಕಾ ಘಟಕ'. ಇದರಲ್ಲಿ ಎರಡು ಭಾಗಗಳಿವೆ. ಒಂದೊಂದು ನಾಲ್ಕುನಾಲ್ಕು ಟೈರ್ ಅಳವಡಿಸಿರುವ ವೇದಿಕೆಗಳಿವೆ.

ಮೊದಲನೆಯದರಲ್ಲಿ ಕಬ್ಬು ಅರೆಯುವ ಯಂತ್ರವಿದೆ (ಕ್ರಷರ್). ಇದು ಡೀಸೆಲ್ ಮೋಟಾರ್ ಉತ್ಪಾದಿಸುವ ವಿದ್ಯುತ್‌ನಿಂದ ಚಾಲನೆಗೊಳ್ಳುತ್ತದೆ. ಕಬ್ಬು ಅರೆದು ಅಲ್ಲಿಂದ ಕಬ್ಬಿನ ಹಾಲು ಪೈಪಿನ ಮೂಲಕ ಬೆಲ್ಲ ತಯಾರಿಸುವ ಎರಡನೇ ಭಾಗಕ್ಕೆ ಹೋಗುತ್ತದೆ. ಈ ಭಾಗದಲ್ಲಿ ಸೌದೆಯಿಂದ ಇಲ್ಲವೇ ರಚ್ಚುವಿನ (ಕಬ್ಬಿನಿಂದ ರಸ ತೆಗೆದು ಉಳಿದ ತ್ಯಾಜ್ಯ ವಸ್ತುವಿನಿಂದ) ಬೆಂಕಿಯಿಂದ ಉಂಟಾಗುವ ಹವೆಯ ಮೂಲಕ ಕಬ್ಬಿನ ಹಾಲು ಕಾಯಿಸಲಾಗುತ್ತದೆ. ಕ್ರಮೇಣ ರಾಸಾಯನಿಕ ಮುಕ್ತ ಸುಣ್ಣವನ್ನು ಮಾತ್ರ ಬಳಸಿಕೊಂಡು ಬೆಲ್ಲ ತಯಾರಿಸಲಾಗುತ್ತದೆ. ಇದು ಈ ಸಂಚಾರಿ ಬೆಲ್ಲ ತಯಾರಿಕ ಘಟಕದ ಕಾರ್ಯವಿಧಾನ. ಜೊತೆಗೆ ಈ ಘಟಕದಲ್ಲಿ ಬೆಲ್ಲ ಹದ ಹಿಡಿಯುವ ನುರಿತ ವ್ಯಕ್ತಿ ಜೊತೆ ಐದು ಮಂದಿ ಕಾರ್ಮಿಕರು ಕೆಲಸ ಮಾಡಬೇಕಾಗುತ್ತದೆ.

'ಮುಂಬೈನ ಯುವ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಈ ಯಂತ್ರವನ್ನು ಅಭಿವೃದ್ಧಿಪಡಿಸಿದ್ದಾರೆ' ಎಂದು ಕಾರಸವಾಡಿ ಮಹದೇವ ತಿಳಿಸಿದರು. ಈ ಬೆಲ್ಲ ತಯಾರಿಕ ಘಟಕವನ್ನು ಟ್ರ್ಯಾಕ್ಟರ್ ಮೂಲಕ ರೈತರ ಕಬ್ಬಿನ ಗದ್ದೆಯ ಹತ್ತಿರ ತೆಗೆದುಕೊಂಡು ಹೋಗಿ ಅಲ್ಲಿಯೇ ಬೆಲ್ಲ ತಯಾರಿಸಿ ಕೊಡುವ ಯೋಜನೆ ಮಹದೇವ ಅವರದ್ದಾಗಿದೆ.

–ಸಿ. ಸಿದ್ದರಾಜು ಆಲಕೆರೆ, ಮಂಡ್ಯ




## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly